

ಅಗ್ರಹಾರ ಕೃಷ್ಣಮೂರ್ತಿ ಅವರೊಂದಿಗೆ ಸಂದರ್ಶಕಿ ಎಂ.ಎಸ್. ಆಶಾದೇವಿ

ರಾಜಕಾರಣ, ವಿದ್ಯಾರ್ಥಿ ಚಳವಳಿ, ‘ಸಂಪೂರ್ಣ ಕ್ರಾಂತಿ’, ಜೆಪಿ ಪ್ರವೇಶ, ಕಾಂಗ್ರೆಸ್ ಪಕ್ಷದಲ್ಲೇ ಹುಟ್ಟಿದ ಭಿನ್ನ ಸ್ವರಗಳು – ಇವೆಲ್ಲವೂ ಸ್ವಾತಂತ್ರ್ಯೋತ್ತರ ಭಾರತದ ಹೊಸ ಯುಗವನ್ನು ಆರಂಭಿಸಿದವು ಅನ್ನಬೇಕು. ಇದನ್ನು ಅಖಿಲ ಭಾರತದಲ್ಲಾದ ವಿದ್ಯಮಾನವೆಂದೇ ಗ್ರಹಿಸಬೇಕು. ಬಿಹಾರ, ಪಶ್ಚಿಮ ಬಂಗಾಳ, ಕರ್ನಾಟಕದಲ್ಲಿ ದೇವರಾಜ ಅರಸರೂ ಸೇರಿದಂತೆ ಅನೇಕರು ಹೊಸ ನಾಯಕತ್ವವನ್ನು ವಹಿಸಿದರು. ಹೊಸ ಬಗೆಯ ಮುಖಾಮುಖಿಗೆ ಸಜ್ಜಾದ ಸಮಯ ಅದು. ವಿದ್ಯಾರ್ಥಿ ಸಮುದಾಯ ಸ್ವಾತಂತ್ರ್ಯ ಹೋರಾಟದ ನಂತರ ಮತ್ತೊಮ್ಮೆ ತೆರೆದುಕೊಂಡ, ತೊಡಗಿಸಿಕೊಂಡ ಮಹತ್ವದ ಹೋರಾಟದ ಸಂದರ್ಭವಾಗಿತ್ತು ಅದು.

◆ **ಈ ಬಗೆಯ ಸನ್ನಿವೇಶಗಳ ಹಿಂದೆ ಯಾಕೆ ಈ ಪ್ರಶ್ನೆ ಇವತ್ತು ತೀವ್ರವಾಗಿ ಕಾಡಿರಬಹುದು ಅನ್ನುವುದಕ್ಕೆ, ಯಾವ ಆಧುನಿಕ ಭಾರತಕ್ಕೆ ಗಾಂಧಿ ತೋರಿದ ದಾರಿ ಒಂದಿದೆ, ಅಂಬೇಡ್ಕರ್ ತೋರಿಸಿದ ದಾರಿ ಒಂದಿದೆ ಅಂತ ನಾವು ಒಡಕಿನಲ್ಲಿ, ಭಿನ್ನ ನೆಲೆಗಳಲ್ಲಿ, ವಿರುದ್ಧ ಗ್ರಹಿಸಿದ್ದರಲ್ಲೇ ದೋಷವಿತ್ತೇ?**

ಅದೂ ಒಂದು ಬಹಳ ಪ್ರಮುಖವಾದ ಕಾರಣ. ಆ ವಿಚಾರಧಾರೆಗಳ ಸಮನ್ವಯತೆಯನ್ನು ಕಂಡುಕೊಂಡ ಅರಿವೇ ಭಾರತದಲ್ಲಿ ನಿರ್ಣಾಯಕವಾದ ಸಂಗತಿ ಅನ್ನಬಹುದು. ನಮ್ಮ ಒಂದು ಪ್ರಸಿದ್ಧವಾದ ಹೇಳಿಕೆಯಾದ ‘ಯೂನಿಟಿ ಇನ್ ಡೈವರ್ಸಿಟಿ’ – ಅದು ಕ್ಲೀಷೆಯೇ ಇರಬಹುದು, ಆದರೆ ತನ್ನಷ್ಟಕ್ಕೆ ಅದು ಒಂದು ಪ್ರಫೌಂಡ್ ಆದ ಹೇಳಿಕೆ ಅದು. ಭಿನ್ನವಿದ್ದೂ ಬೆರೆಯಬಹುದು ಅನ್ನುವುದನ್ನು ಘನವಾಗಿ ಆ ಮಾತು ಹೇಳುತ್ತದೆ.

◆ **ಆದರೆ, ಈ ಹೇಳಿಕೆಯ ಬಗ್ಗೆಯೇ ನಮಗೆ ಅನುಮಾನ ಹುಟ್ಟಿದ್ದು ಭಾರತದ ಬಹುತ್ವಗಳಿಗೆ ಸಮಾನ ವೇದಿಕೆ ಸೃಷ್ಟಿಯಾಗಲಿಲ್ಲ ಅನ್ನುವ ಕಾರಣಕ್ಕೆ.**